ಡಿಪ್ಲೊಮಾ ಮೌಲ್ಯಮಾಪನದ ದರಗಳನ್ನು ಹೆಚ್ಚಿಸುವಲ್ಲಿ ಉಂಟಾಗುತ್ತಿರುವ ವಿಳಂಬದ ಬಗ್ಗೆ

೧೪೫೫ (೧೪೩೩) ಶ್ರೀ ಗೋಪಾಲ್ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪಾಲಿಟೆಕ್ನಿಕ್ ಶಿಕ್ಷಕರಿಗೆ ಮೌಲ್ಯಮಾಪನ ದರಗಳಿಗೆ ಸಂಬಂಧಿಸಿದಂತೆ ಕೆಲವು ವಿಷಯಗಳ ಮೌಲ್ಯಮಾಪನದ ದರಗಳನ್ನು ಮಾತ್ರ ಹೆಚ್ಚಿಸಲಾಗಿದ್ದು ಇನ್ನೂ ಬಾಕಿ ಉಳಿದಿರುವ ವಿಷಯಗಳ ಮೌಲ್ಯಮಾಪನ ದರಗಳನ್ನು ಸಹ ಹೆಚ್ಚಿಸಲು ಸರ್ಕಾರದವರು ಒಪ್ಪಿಕೊಂಡು ಇಲ್ಲಿಯ ತನಕ ಹೆಚ್ಚಿಸದೇ ಇರುವುದು ನಿಜವೇ :—

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಎಷ್ಟು ಸಮಯದೊಳಗೆ ಸದರಿ ಮೌಲ್ಯಮಾಪನ ದರಗಳನ್ನು ಸರ್ಕಾರವು ಹೆಚ್ಚಿಸುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಕೆಲವು ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲಾಗಿದೆ ಮತ್ತು ಉಳಿದ ಕೆಲವು ವಿಷಯಂಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಕೆಳಕಂಡ ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲಾಗಿದೆ.

೧) ತತ್ವ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ರಚನೆಯ ದರ

೨) ಉತ್ತರ ಪುಸ್ತಕಗಳ ಮೌಲ್ಯಮಾಪನ ದರ

೩) ಪ್ರಯೋಗಿಕ ಪರೀಕ್ಷೆಯ ರಚನೆಯ ದರ

೪) ಪ್ರಯೋಗಿಕ ಪರೀಕ್ಷೆಯ ನಿರ್ವಹಣೆ ದರ

ಆ) ಮೌಲ್ಯಮಾಪನ ದರಗಳನ್ನು ಹೆಚ್ಚಿಸುವ ವಿಷಯವನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಹಾಗೂ ಇಲಾಖೆಯ ಅಡಿಯಲ್ಲಿ ಬರುವ ಇತರ ಇಲಾಖೆಗಳ ವಿಷಯಂದಲ್ಲಿ ಆಗುವ ಪರಿಣಾಮಗಳನ್ನು ಚಿಂತಿಸಿ ನಂತರ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಇ) ಪ್ರಸ್ತಾವನೆಯನ್ನು ಪರಿಶೀಲಿಸಿ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸುವಲ್ಲಿ ಉಂಟಾಗಿರುವ ವಿಳಂಬದ ಬಗ್ಗೆ

೧೪೬೬ (೧೪೨೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿನ ಅನುಸೂಚಿತ ಜಾತಿ ಅನುಸೂಚಿತ ಪಂಗಡ ಜಾತಿಯ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆಯೇ? ಹಾಗೂ ಈ ತರಗತಿಗಳನ್ನು ವರ್ಷದ ಯಾವ ತಿಂಗಳಿನಿಂದ ಪ್ರಾರಂಭಿಸಲಾಗುತ್ತಿದೆ ?

ಆ) ಎಲ್ಲಾ ಪಾಲಿಟೆಕ್ನಿಕ್‌ಗಳೂ ಸೇರಿ ಈ ದಿಸೆಯಲ್ಲಿ ಎಷ್ಟು ಶಿಕ್ಷಕರನ್ನು ನೇಮಕ ಮಾಡಲಾಗಿದೆ (ಶಿಕ್ಷಕರ ಹೆಸರು, ಪದನಾಮ ಮುಂತಾದ ಪೂರ್ಣ ವಿವರಗಳನ್ನು ನೀಡುವುದು)

ಇ) ಬೆಂಗಳೂರಿನ ಮುದ್ರಣ ಪಾಲಿಟೆಕ್ನಿಕ್‌ನಲ್ಲಿ ಹಾಗೂ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ? ಹಾಗಿದ್ದಲ್ಲಿ, ಈ ಸಂಸ್ಥೆಯಲ್ಲಿ ತರಗತಿಗಳನ್ನು ಇಲ್ಲಿವರೆಗೂ ನಡೆಸದಿರಲು ಕಾರಣಗಳೇನು?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಸಾಮಾನ್ಯವಾಗಿ ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳ ಮೊದಲನೆ ದಿನಾಂಕದಿಂದ ಈ ತರಗತಿಗಳನ್ನು ನಡೆಸಲಾಗುತ್ತಿದೆ.

ಆ) ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ನಿಂದ ಒಟ್ಟಾರೆ ೧೯೮೬–೮೭ನೇ ಸಾಲಿಗೆ ೩೦೮ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಶಿಕ್ಷಕರ ಹೆಸರುಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗಿದೆ.

ಇ) ಈ ಪದ್ಧತಿಯನ್ನು ಈ ಎರಡೂ ಪಾಲಿಟೆಕ್ನಿಕ್‌ಗಳಲ್ಲೂ ಹಿಂದಿನಿಂದಲೂ ಅನುಸರಿಸಲಾಗುತ್ತಿದೆ.

೧೯೮೬–೮೭ನೇ ಸಾಲಿನ ವಿಶೇಷ ತರಗತಿಗಳನ್ನು ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ದಿನಾಂಕ ೧–೧೦-೮೬ರಿಂದ ಆಗಲೇ ನಡೆಸಲಾಗುತ್ತಿದೆ. ಮತ್ತು ಅದನ್ನು ೩೧–೩-೮೭ರವರೆಗೂ ಮುಂದುವರೆಸಲಾಗುತ್ತಿದೆ.

ಮುದ್ರಣ ಪಾಲಿಟೆಕ್ನಿಕ್‌ನಲ್ಲಿಯೂ ಸಹ ಇಲ್ಲಿಯವರೆವಿಗೂ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿತ್ತು.

ಈ ಶೈಕ್ಷಣಿಕ ವರ್ಷದಲ್ಲಿ ಈ ಕೆಳಗೆ ಕಾಣಿಸಿರುವ ಕಾರಣಗಳಿಂದ ಇನ್ನೂ ವಿಶೇಷ ತರಗತಿಗಳನ್ನು ನಡೆಸಲಾಗಿಲ್ಲ. ಈ ಮುದ್ರಣ ಪಾಲಿಟೆಕ್ನಿಕ್‌ಗೆ ತನ್ನದೇ ಆದ ಕಟ್ಟಡವಿಲ್ಲ. ಎಸ್.ಜೆ. ಪಾಲಿಟೆಕ್ನಿಕ್ ಅನೇಕ ಕಟ್ಟಡದ ಭಾಗಗಳನ್ನು ಕೆಡವಿ ಹಾಕಲಾಗಿದೆ; ಈಗ ತರಗತಿಗಳನ್ನು ಶೆಡ್ಡುಗಳಲ್ಲಿ ನಡೆಸಲಾಗುತ್ತಿದೆ. ಆದ್ದರಿಂದ ಸಾಯಂಕಾಲದ ಮೇಲೆ ಈ ವಿಶೇಷ ತರಗತಿಗಳನ್ನು ನಡೆಸಲು ಅಡಚಣೆಯಾಗಿದೆ.

ಈಗ ದಿನಾಂಕ ೨೭–೧–೮೭ರಿಂದ ವಿಶೇಷ ತರಗತಿಗಳನ್ನು ನಡೆಸಲು ಅನುಕೂಲ ಮಾಡಲಾಗಿದೆ. ಮತ್ತು ಪೆಚ್ಚಿವರಿಯ ಕಾಲವನ್ನು ಉಪಯೋಗಿಸಿ ಪಠ್ಯ ಕ್ರಮಗಳನ್ನು ನಿಗದಿತ ಕಾಲದಲ್ಲಿ ಮುಗಿಸುತ್ತೇವೆಂದು ಪ್ರಾಚಾರ್ಯರು ತಿಳಿಸಿರುತ್ತಾರೆ.

ಅನೆಕ್ಸರ್ಸ್

ಕ್ರಮ ಸಂಖ್ಯೆ	ಪಾಲಿಟೆಕ್ನಿಕ್‌ಗಳ ಹೆಸರು	ಶಿಕ್ಷಕರ ಸಂಖ್ಯೆ	ವಿಷಯದ ಸಂಖ್ಯೆ
೧)	ಡಿ.ಎ.ಸಿ.ಬಿ. ಪಾಲಿಟೆಕ್ನಿಕ್, ಚಿಕ್ಕಮಗಳೂರು	೭	೭
೨)	ಕೆ.ಪಿ.ಟಿ. ಮಂಗಳೂರು	೧೧	೧೧
೩)	ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ	೧೦	೧೦
೪)	ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಪೇಟೆ	೧೦	೧೦
೫)	ಪಿ.ಪಿ.ಪಿ. ಪಾಲಿಟೆಕ್ನಿಕ್, ಮೈಸೂರು	೧೫	೧೫
೬)	ಮಹಿಳಾ ಪಾಲಿಟೆಕ್ನಿಕ್, ಮಂಗಳೂರು	೧೦	೧೦
೭)	ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ	೧೦	೧೦
೮)	ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ	೭	೭
೯)	ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ	೧೦	೧೦
೧೦)	ಡಿ.ಆರ್.ಆರ್. ಪಾಲಿಟೆಕ್ನಿಕ್, ದಾವಣಗೆರೆ	೧೪	೧೪
೧೧)	ಎಲ್.ವಿ. ಪಾಲಿಟೆಕ್ನಿಕ್, ಹಾಸನ	೧೦	೧೦
೧೨)	ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ	೧೫	೧೫
೧೩)	ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ	೧೧	೧೧
೧೪)	ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ	೧೦	೧೦
೧೫)	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ	೪	೪

೧	೨	೩	೪
೧೬)	ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ	೫	೫
೧೭)	ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾಂ	೧೫	೧೫
೧೮)	ಮುದ್ರಣ ಪಾಲಿಟೆಕ್ನಿಕ್, ಬೆಂಗಳೂರು	೮	೮
೧೯)	ಟೆಕ್ಸ್‌ಟೈಲ್ಸ್ ಪಾಲಿಟೆಕ್ನಿಕ್, ಬೆಂಗಳೂರು	೯	೯
೨೦)	ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು	೧೫	೧೫
೨೧)	ಎಸ್.ಆರ್.ಸಿ.ಐ.ಎಂ. ಬೆಂಗಳೂರು	೪	೪
೨೨)	ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು	೧೦	೧೦
೨೩)	ಕರಕುಶಲ ಪಾಲಿಟೆಕ್ನಿಕ್, ದಾವಣಗೆರೆ	೫	೫
೨೪)	ಬಿ.ಐ.ಎಸ್.ಎಲ್, ಎಸ್.ಜಿ., ಭದ್ರಾವತಿ	೧೦	೧೦
೨೫)	ಬಿ.ಆರ್.ಐ.ಸಿ.ಪಿ. ಬೆಂಗಳೂರು	೮	೮
೨೬)	ಕೆ.ಜೆ.ಕೆ.ಐ. ಧಾರವಾಡ	೧೪	೧೪
೨೭)	ಎ.ಪಿ.ಎಸ್. ಬೆಂಗಳೂರು	೧೧	೧೧
೨೮)	ಎಸ್.ಜಿ. ಪಾಲಿಟೆಕ್ನಿಕ್, ಬೆಂಗಳೂರು	೩೦	೩೦
೨೯)	ಬಿ.ಟಿ.ವಿ.ಎಸ್. ಪಾಲಿಟೆಕ್ನಿಕ್, ಬಾಗಲಕೋಟೆ	೧೦	೧೦
		೩೦೮	೩೦೮

ಲಿಂಗಾಪುರ (ಎಸ್-ಕೆ) ಏತ ನೀರಾವರಿ ಯೋಜನೆ

೧೪೭ (೧೧೯) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ, ಆಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೀಳಗಿ ತಾಲ್ಲೂಕಿನ ಲಿಂಗಾಪುರ (ಎಸ್.ಕೆ) ಗ್ರಾಮದ ಹತ್ತಿರ ಘಟಪ್ರಭಾ ನದಿಗೆ ಯಾತ ನೀರಾವರಿ ಯೋಜನೆ ಆರಂಭಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಯ ಬಗ್ಗೆ ನೀಲಿ ನಕ್ಷೆ ಅಂದಾಜು ಪೆಚ್ಚ ಸಿದ್ಧವಾಗಿದೆಯೇ?

ಇ) ಹಾಗಿದ್ದಲ್ಲಿ, ಕಾಮಗಾರಿ ಆರಂಭವಾಗುವುದು ಯಾವಾಗ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಜೇಳಿಕಾಳು ಹಾಗೂ ಹತ್ತಿ ಬೆಳೆಯಲು ಸಂಶೋಧನೆಯ ಬಗ್ಗೆ

೧೪೮ (೧೧೯) ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜೇಳಿಕಾಳು ಹಾಗೂ ಹತ್ತಿ ಬೆಳೆಯ ಸಂಶೋಧನೆಗಾಗಿ ಪರವಾನಗಿ ಕೋರಿ ಬಂದ ಅರ್ಜಿಗಳೆಷ್ಟು, ಅವ್ಕ ಎಷ್ಟು ದಿನಗಳಿಂದ ಇನ್ನೂ ವಿಚಾರಣೆಗೆಂದು ಸ್ವೀಕೃತವಾಗಿವೆ, ಅವುಗಳನ್ನು ಸಿಕಾಲ್ಲ ಮಾಡಲು ಇನ್ನೂ ಎಷ್ಟು ಕಾಲ ಬೇಕಾಗಬಹುದು?